**ಸಾಕ್ಷಿಗೆ ದಿನಾಂಕ 06-07-2023 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಐ.ಬಿ.ಎ ವಕೀಲರಿಂದ**

ನನ್ನ ಮನೆಯ ಸಂಖ್ಯೆಃ 1-99 ಆಗಿರುತ್ತದೆ. ನನ್ನ ತಂದೆಗೆ ಒಟ್ಟು ಮೂರು ಜನ ಮಕ್ಕಳು ಇರುತ್ತೇವೆ. ನಾನು ಹಿರಿಯ ಮಗನಾಗಿದ್ದು, ನನ್ನ ತಮ್ಮಂದಿರ ಹೆಸರು ದೊಡ್ಡಪ್ಪಾ ಮತ್ತು ಬಸಲಿಂಗಪ್ಪಾ ಆಗಿರುತ್ತವೆ. ಬಸಲಿಂಗಪ್ಪಾ ಈಗ ಮರಣಹೊಂದಿರುತ್ತಾನೆ. ನಾವು ಮೂರು ಜನ ಅಣ್ಣತಮ್ಮಂದಿರು ಸದರಿ ಮನೆ ಸಂಖ್ಯೆಃ 1-99 ರ ಮನೆಯಲ್ಲಿ ವಿಭಾಗ ಮಾಡಿಕೊಂಡು ಅದೇ ಮನೆಯಲ್ಲಿ ಬೇರೆ ಬೇರೆಯಾಗಿ ವಾಸವಾಗಿರುತ್ತೇವೆ ಎಂದರೆ ಸರಿ. ಸದರಿ ಮನೆ ಸುಮಾರು 100 ರಿಂದ 150 ವರ್ಷಗಳಷ್ಟು ಹಳೆಯದ್ದಾಗಿರುತ್ತದೆ ಎಂದರೆ ಸರಿ. ನನ್ನ ಮನೆಯ ಪೂರ್ವಕ್ಕೆ ದಾರಿ ಇದ್ದು, ಪಶ್ಚಿಮಕ್ಕೆ ಖಾಲಿ ಜಾಗ ಇದ್ದು, ಉತ್ತರಕ್ಕೆ ಬಸ್ಸಪ್ಪ ಇತನ ಮನೆ ಮತ್ತು ದಕ್ಷಿಣಕ್ಕೆ ಸಾರ್ವಜನಿಕ ದಾರಿ ಇರುತ್ತದೆ.

ನಮ್ಮ ಮನೆಯ ಉತ್ತರಕ್ಕೆ ಬಸ್ಸಪ್ಪ ತಂದೆ ಈರಪ್ಪಾ ಸಾಲಿ ಇವರ ಮನೆ ಇದ್ದು, ಸದರಿ ಬಸ್ಸಪ್ಪ ಇತನ ಮಗನೇ ಪ್ರತಿವಾದಿ ಇರುತ್ತಾನೆ ಎಂದರೆ ಸರಿ. ಪ್ರತಿವಾದಿಗೆ ಒಟ್ಟು ನಾಲ್ಕು ಜನ ಅಣ್ಣತಮ್ಮಂದಿರಿದ್ದು ಒಬ್ಬನು ಮೃತಪಟ್ಟಿರುತ್ತಾನೆ. ಪ್ರತಿವಾದಿ ತಾನು ಇದ್ದ ಮನೆಯಲ್ಲಿ ತನ್ನ ಉಳಿದ ಅಣ್ಣತಮ್ಮಂದಿರೊಂದಿಗೆ ವಿಭಾಗ ಮಾಡಿಕೊಂಡು ಅದೇ ಮನೆಯಲ್ಲಿ ವಾಸವಾಗಿರುತ್ತಾನೆ ಎಂದರೆ ಸರಿ.

ಪ್ರತಿವಾದಿಯ ಮನೆಯ ಉತ್ತರಕ್ಕೆ ಅಯ್ಯಪ್ಪಾ ಜಮಶೆಟ್ಟಿ ಇವರ ಮನೆ ಇರುತ್ತದೆ ಎಂದರೆ ಸರಿ. ನಮ್ಮ ಮನೆ ಮತ್ತು ಪ್ರತಿವಾದಿಯ ಮನೆಯ ನಡುವೆ ಸುಮಾರು 5 ಅಡಿ ಅಗಲದ ಒಂದು ದಾರಿ ಇರುತ್ತದೆ ಎಂದರೆ ಸರಿ. ಸದರಿ ದಾರಿ ಸಾರ್ವಜನಿಕ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ದಾರಿಯಲ್ಲಿ

ನಮ್ಮ ಓಣಿಯ ಜನರು ಓಡಾಡುತ್ತಾರೆ ಎಂದರೆ ಸರಿ. ನಮ್ಮ ಮನೆ ನಂಃ 1-99 ರ ಸುತ್ತಲು ಕಂಪೌಂಡ ಗೋಡೆ ಕಟ್ಟಿಕೊಂಡಿರುತ್ತೇವೆ ಎಂದರೆ ಸರಿ.

ಪ್ರತಿವಾದಿಯ ಅಣ್ಣತಮ್ಮಂದಿರಾದ ಮಹಾದೇವಪ್ಪಾ ಮತ್ತು ದೇವೆಂದ್ರಪ್ಪಾ ಇವರು ಪೂರ್ವ ದಿಕ್ಕಿನ ರಸ್ತೆಯ ಮೂಲಕ ಓಡಾಡುತ್ತಾರೆ ಎಂದರೆ ಸರಿ. ಪ್ರತಿವಾದಿ ದಕ್ಷಿಣ ದಿಕ್ಕಿನಿಂದಲೇ ಓಡಾಡುತ್ತಾನೆ ಎಂದರೆ ಸಾಕ್ಷಿಯು ಅಲ್ಲಿ ದಾರಿ ಇಲ್ಲ ಎಂದು ನುಡಿಯುತ್ತಾರೆ. ನಮ್ಮ ಮತ್ತು ಪ್ರತಿವಾದಿಯ ಮನೆಗಳ ನಡುವೆ ದಾರಿ ಇದ್ದು, ಸದರಿ ದಾರಿಯೇ ಸದರಿ ಮನೆಗಳನ್ನು ಬೇರೆ ಬೇರೆ ಮಾಡುತ್ತದೆ ಎಂದರೆ ಸರಿಯಲ್ಲ.

ನಿಪಿ-2 ರ ನಕ್ಷೆಯನ್ನು ನಾನೇ ತಯ್ಯಾಸಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ನಿಪಿ-2 ರ ನಕ್ಷೆ ಹಳೆಯದ್ದಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-2 ಸುಮಾರು 18 ವರ್ಷಗಳಷ್ಟು ಹಳೆಯದ್ದಾಗಿರುತ್ತದೆ. ನಾನೇ ನಿಪಿ-2 ಕ್ಕೆ ಪಂಚಾಯತಿ ಮುದ್ರೆಯನ್ನು ಹಾಕಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ಅನ್ನು ನಾನೇ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ತನ್ನ ಜಾಗದಲ್ಲಿ ವಾಸವಾಗಿರುತ್ತಾನೆ ಎಂದರೆ ಸರಿಯಲ್ಲ. ಪ್ರತಿವಾದಿಯು ನನ್ನ ಜಾಗವನ್ನು ಅತಿಕ್ರಮಣ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯು ನನಗೆ ಪರಿಚಯ ಇರುವುದಿಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.